# ಶ್ರೀವಿದ್ಯಾಮಾನ್ಯರು – ಮತ್ತು ಅವರಿಂದ ಪವಾಡ ಸದೃಶ ಕಾರ್ಯಗಳು

**ಪವಾಡಗಳು –**

೧. ಒಮ್ಮೆ ಶ್ರೀಪಾದರು ಗಂಗಾಸ್ನಾನಕ್ಕೆ ಹೋಗುವ ಮಾರ್ಗದಲ್ಲಿ, ಒಂದು ಊರಿನಲ್ಲಿ ಸಣ್ಣ ದೇವಸ್ಥಾನದಲ್ಲಿ ತಂಗಿದ್ದರು. ಆಗ ಒಬ್ಬ ವನಿತೆ ತನಗೆ ಕುಷ್ಠರೋಗವಿರುವುದನ್ನು ಶ್ರೀಗಳಲ್ಲಿ ಭಿನ್ನವಿಸಿದಾಗ, ಶ್ರೀಪಾದರು ತಾವು ಮಂತ್ರಾಲಯದಿಂದ ತಂದಿದ್ದ ಮೃತ್ತಿಕೆಯನ್ನು ನೀಡಿ, ಅದನ್ನು ಹಚ್ಚಿಕೊಂಡು ತೀರ್ಥವನ್ನು ತೆಗೆದುಕೊಂಡರೆ ವಾಸಿಯಾಗುವುದೆಂದರು. ಅದನ್ನು ಪಡೆದ ಮಹಿಳೆ ಕೆಲವೇ ದಿನಗಳು ಹಚ್ಚಿಕೊಂಡಳು. ಶ್ರೀಪಾದರು ಅಷ್ಟರಲ್ಲಿ ಕಲ್ಕತ್ತಾ, ಗಂಗಾಸಾಗರ ಸಂಗಮದರ್ಶನ ಸ್ನಾನ ಮಾಡಿ ಅದೇ ಊರಿನಲ್ಲಿ ಬಂದಿಳಿದಾಗ, ಆ ವನಿತೆ ಬಂದು ತನ್ನ ಕೈಯನ್ನು ತೋರಿಸಿ ಪೂರ್ಣಗುಣಮುಖವಾಗಿರುವುದನ್ನು ತಿಳಿಸಿದಳು

೨. ಮೂಕ ವಾಗ್ಮಿಯಾದದ್ದು – ಬೆಂಗಳೂರಿನಲ್ಲಿ ಶ್ರೀಗಳು ಚಾತುರ್ಮಾಸ್ಯಕ್ಕೆ ಕೂತಿದ್ದಾಗ, ವಾಸುದೇವನೆಂಬ ಬೆಂಗಳೂರಿನ ಒಬ್ಬ ಶ್ರೀಮಂತರ ಪುತ್ರ ಹುಟ್ಟುಮೂಕನಾಗಿದ್ದ. ಸ್ವಾಮಿಗಳು ಅವನಿಗೆ ನಿತ್ಯ ಪೂಜಾಕಾಲಕ್ಕೆ ಬಂದು ತೀರ್ಥ, ಗಂಧಾದಿಗಳನ್ನು ಸ್ವೀಕರಿಸಲು ಹೇಳಿದರು. ಅದರಂತೆ ಮೂರು ತಿಂಗಳು ಕಳೆದಾಗ, ಅವನ ಬಾಯಿಂದ "ಅಮ್ಮಾ" ಎಂಬ ಮಾತು ಬಂದಿತು. ನಂತರ ಇನ್ನು ೩ ತಿಂಗಳು ಕಳೆದಂತೆ ಶ್ರೀಗಳು ಆ ಹುಡುಗನಿಗೆ "ಪೂಜ್ಯಾಯ ರಾಘವೇಂದ್ರಾಯ" ಶ್ಲೋಕವನ್ನು ಹೇಳಿ ಉಪದೇಶಿಸಿದರು. ಆ ಬಾಲಕ ವಾಸುದೇವ ಈಗ ಚೆನ್ನಾಗಿ ಮಾತನಾಡಬಲ್ಲವನಾಗಿದ್ದಾನೆ.

೩. ಧಾರವಾಡಲ್ಲಿ ಓರ್ವಭಕ್ತೆ ಶ್ರೀಮತಿ ಸೀತಾಬಾಯಿಗೆ ನಾಲಿಗೆಗೆ ರುಚಿಯೇ ಗೊತ್ತಾಗುತ್ತಿರಲಿಲ್ಲ. ಯಾವ ಔಷಧ ಉಪಚಾರವೂ ಫಲಕಾರಿಯಾಗಲಿಲ್ಲ. ಶ್ರೀಗಳು ಅವಳಿಗೆ ಧನ್ವಂತರಿಯನ್ನು ಸ್ಮರಿಸಿ "ಅಚ್ಯುತಾನಂತ ಗೋವಿಂದ ಸ್ಮೃತಿ ಮಾತ್ರಾರ್ತಿನಾಶನ

ರೋಗಾನ್ಮೇ ನಾಶಯಾಶೇಷಾನ್ ಆಶು ಧನ್ವಂತರೇ ಹರೇ” ಎಂಬ ಶ್ಲೋಕವನ್ನು ಹೇಳಿ ಕಲ್ಲು ಸಕ್ಕರೆ ಮಂತ್ರಾಕ್ಷತೆ ನೀಡಿದರು. ಏಳು ದಿನಗಳೊಳಗೆ ಅವಳಿಗೆ ನಾಲಿಗೆಗೆ ರುಚಿ ಪ್ರಜ್ಞೆ ಬಂದಿತ್ತು.

೪. ಬೆಂಗಳೂರಿನ ಶ್ರೀ ಎ.ಎನ್. ನರಹರಿರಾವ್ ಅವರಿಗೆ ದುರ್ದೈವದಿಂದ ೪೦ರ ಹರೆಯದಲ್ಲಿಯೇ ಕ್ಯಾಟರಾಕ್ಟ್ ಕಣ್ಣಿನ ಪ್ರೊರೆಯ ದೋಷದಿಂದ ಶಸ್ತ್ರಚಿಕಿತ್ಸೆಯಾಯಿತು. ಕೆಲವು ತಿಂಗಳ ಬಳಿಕ ಪುನ: ಕಣ್ಣಿಗೆ ಪೊರೆ ಬಂದಿತು. ಆಗ ಶ್ರೀಗಳನ್ನು ಸಂಪರ್ಕಿಸಿದರು. ಶ್ರೀಪಾದರು ತಮ್ಮ ಕೃಪಾದೃಷ್ಟಿ ಬೀರಿ “ಘೃಣ್: ಸೂರ್ಯ” ಎಂಬ ಮಂತ್ರವನ್ನು ದಿನಕ್ಕೆ ನೂರೆಂಟು ಬಾರಿ ಜಪಿಸಲು ಹೇಳಿದರು. ಶ್ರೀಪಾದರ ಆದೇಶದಂತೆ ನಿತ್ಯವೂ ತಮ್ಮ ಸಂಧ್ಯಾವಂದನೆಯ ನಂತರ ಜಪಿಸಿದರು. ಪೂರ್ಣ ಗುಣಮುಖವಾಯಿತು.

೫. ಸಂತಾನಭಾಗ್ಯ – ಗದುಗಿನ ಶ್ರೀನಾರಾಯಣರಾವ್ ದಂಪತಿಗಳಿಗೆ ಸಂತಾನಭಾಗ್ಯವನ್ನು ಕರುಣಿಸಿದ್ದಾರೆ.

೬. ಪ್ರೇತಬಾಧೆ ನಿವಾರಣೆ – ಆದೋನಿಯ ಶ್ರೀ ಹಾಲ್ವಿ ಹನುಮಂತರಾವ್ ಅವರ ಪತ್ನಿ ಶ್ರೀಮತಿ ವೆಂಕಮ್ಮನವನ್ನು ಪ್ರೇತಬಾಧೆಯಿಂದ ವಿಮುಕ್ತಿಗೊಳಿಸಿದರು ತಮ್ಮ ತಪಶಕ್ತಿಯಿಂದ.

೭. ಅಂತಿಮ ಭಾಗ್ಯಶಾಲಿ : ಶ್ರೀ ಅನಂತ ಮಾಧವ ಅವಧೂತ – ಇವನ ಬಗ್ಗೆ ವಿಶೇಷ ಲೇಖನ ಬರೆಯಲಾಗಿದೆ.

**Source – Sri Korlahalli Venkateshachar** **Collection : Narahari Sumadhwa**